ಶ್ರೀಮತಿ ಮನೋರಮಾ ಮಧ್ವರಾಜ್.—(ಆರೋಗ್ಯ ಸಚಿವೆಯವರು)

ಅ) ಇಲ್ಲ

ಆ) ಜಿಲ್ಲಾ ಪರಿಷತ್‌ಗಳಿಗೆ ಒಳಪಡದ ಅಂದರೆ ಜಿಲ್ಲಾ ಆಸ್ಪತ್ರೆ, ವಿಜಾಪುರ ಮತ್ತು ಟಿ. ಬಿ. ಆಸ್ಪತ್ರೆ ವಿಜಾಪುರ ಈ ಆಸ್ಪತ್ರೆಗಳಿಗೆ ಮಾತ್ರ ಸರ್ಕಾರಿ ಔಷಧಿ ಮಳಿಗೆ ಬೆಂಗಳೂರು ಯಿಂದ ಔಷಧಿಗಳು ಸರಬರಾಜು ಮಾಡಲಾಗಿದೆ. ಇತರ ಕೇಂದ್ರಗಳಿಗೆ ಜಿಲ್ಲಾ ಪರಿಷತ್ ಮೂಲಕ ಔಷಧಿ ಸರಬರಾಜು ಮಾಡಲಾಗಿದೆ.

ಇ) ಜಿಲ್ಲಾ ಆಸ್ಪತ್ರೆ, ವಿಜಾಪುರ ಮತ್ತು ಟಿ. ಬಿ. ಆಸ್ಪತ್ರೆ, ವಿಜಾಪುರ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗ ಆರೋಗ್ಯ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಡಾ॥ ಆರ್. ಬಿ. ಚೌಧರಿ.—ಸಪ್ಲೈ ಆಫ್ ಸ್ಯೂರಿಯಸ್ ಡ್ರಗ್ಸ್ ಆರ್ ಸಬ್ ಸ್ಟ್ಯಾಂಡರ್ಡ್ ಡ್ರಗ್ಸ್ ಏನಿದೆ ಇದು ನಿರಂತರವಾಗಿ ಸಾಗುತ್ತಾ ಬರುತ್ತಿದೆ. ಹಿಂದೆಯೂ ಕೂಡ ಸದನದಲ್ಲಿ ಎಷ್ಟೋಸಲ ಇದರ ವಿಷಯ ಪ್ರಸ್ತಾಪವಾಗಿದೆ. ಈ ಸಲ ಕೂಡ ನನ್ನ ಗಮನಕ್ಕೆ ಒಂದಿದ್ದು ನಾನು ಪ್ರಶ್ನೆಯನ್ನು ಕೇಳಬೇಕಾಯಿತು. ಆದರೆ 'ಇಲ್ಲ' ಎಂದು ಉತ್ತರ ದೊರೆತಿದೆ. ಮಾನ್ಯ ಸಚಿವೆಯರು ಬಿಜಾಪುರಕ್ಕೆ ಬಂದಾಗ ಇದನ್ನು ಕೂಲಂಕಷವಾಗಿ ತನಿಖೆಮಾಡಿ ಇದರ ಬಗ್ಗೆ ಏನಾದರೂ ಪರಿಹಾರ ಕಂಡುಹಿಡಿಯುತ್ತಾರೆಯೇ ಎಂದು ಕೇಳಬಯಸುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೆ, ನಿರ್ದಿಷ್ಟವಾದ ಯಾವುದೇ ಒಂದು ಆಪಾದನೆಯನ್ನು ಅವರು ತೋರಿಸಿಕೊಟ್ಟರೆ ಖಂಡಿತವಾಗಿಯೂ ಅದರ ಮೇಲೆ ನಾವು ಕ್ರಮ ತೆಗೆದು ಕೊಳ್ಳುತ್ತೇವೆ. ಅದಕ್ಕೆ ಬಿಜಾಪುರದ ತನಕ ನಾನು ಬರಬೇಕಾಗಿಲ್ಲ. ಅವರು ಹೇಳಿದರೆ ಖಂಡಿತ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಡಾ॥ ಆರ್.ಬಿ. ಚೌಧರಿ.—ತಾವು ಬಂದಾಗ ನಿರ್ದಿಷ್ಟವಾದದ್ದನ್ನೇ ನಾವು ತೋರಿಸಿಕೊಡುತ್ತೇವೆ.

ಅಧ್ಯಕ್ಷರು.—ಅವರು ಅಲ್ಲಿಗೆ ಬರಲೇಬೇಕೆ. ?

ಡಾ॥ ಆರ್. ಬಿ. ಚೌಧರಿ.—ಅವರು ಬಂದಾಗ ಎಂದು ನಾನು ಹೇಳಿದ್ದೇನೆ. ಅವರು ಬರಲೇ ಬೇಕೆಂದಲ್ಲಿ. ಬಿಜಾಪುರ ಅಂದರೆ ನೆಗ್ಲೆಕ್ಟ್ ಮಾಡುತ್ತೀರಾ ? ಬರಲೇಬೇಕಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.—ಆಯಿತು ಸ್ವಾಮಿ, ನಾನು ಹೋಗಿ ನೋಡುತ್ತೇನೆ.

ಅಧ್ಯಕ್ಷರು.—ಹೋಗಿ ನೋಡಿ. Next, Sri Modgek Desai, the Hon. Minister for Rural Development has asked for time. We Will take it up next week. ಮಾನ್ಯ ಕಾರಡಗಿಯವರೆ, ನಿಮ್ಮ ಪ್ರಶ್ನೆಗೂ ಟೈಂ ಕೇಳಿದ್ದಾರೆ, ಅದು ಮುಂದಿನ ವಾರ ಬರುತ್ತದೆ.

ಬೈಲಾಟರಲ್ ಅಸಿಸ್ಟೆಡ್ ಎಫ್. ಆರ್. ಜಿ, (ಜರ್ಮನಿ) ಪ್ರಾಜೆಕ್ಟ್ ಬಗ್ಗೆ

೭೧೬. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೈಲಾಟರಲ್ ಅಸಿಸ್ಟೆಡ್ ಎಫ್. ಆರ್. ಜಿ. (ಜರ್ಮನಿ) ಪ್ರಾಜೆಕ್ಟನ್ನು ಹಾಸನ ಜಿಲ್ಲೆಯಲ್ಲಿ ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ ?

ಆ) ಈ ಯೋಜನೆಯಿಂದ ಗ್ರಾಮಾಂತರ ಪ್ರದೇಶದಲ್ಲಿ ಒದಗಿರುವ ಅನುಕೂಲಗಳು ಏನು ?

ಇ) ಈ ಯೋಜನೆಯು ಎಷ್ಟು ವರ್ಷಗಳಲ್ಲಿ ಕಾರ್ಯಗತವಾಗಲಿದೆ? ಹಾಗೂ ಈ ಯೋಜನೆಯ ಒಟ್ಟು ಅಂದಾಜು ಮೊಬಲಗೆಷ್ಟು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯ ಸಚಿವರು).—

ಅ) ಹೌದು.

ಆ) ಪೂರೈಪೆ ಯೋಜನೆಯಲ್ಲಿ ಸಮಗ್ರ ಗ್ರಾಮಾಂತರ ಕುಡಿಯುವ ನೀರು ಸರಬರಾಜು ಶೌಚಾಲಯ ಮತ್ತು ನಿರ್ಮಲೀಕರಣ ಮುಂತಾದ ಸೌಲಭ್ಯಗಳನ್ನು ಮತ್ತು ಗ್ರಾಮದ ಸಂಪೂರ್ಣ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಒದಗಿಸಲು ಯೋಜಿಸಲಾಗಿದೆ.

ಇ) ಯೋಜನೆಯು ಕಾರ್ಯರೂಪಕ್ಕೆ ಬಂದಮೇಲೆ ಸುಮಾರು ಐದು ವರ್ಷಗಳಲ್ಲಿ ಮುಗಿಸುವ ಯೋಜನೆ ಇದೆ. ರೂಪರೇಖೆ ಯೋಜನೆಯಲ್ಲಿ ನಮೂದಿಸಿರುವ ಅಂದಾಜು ೨೭.೭೦ ಕೋಟಿ ರೂಪಾಯಿಗಳು.

ಶ್ರೀ ಕೆ. ಹೆಚ್. ಹನುಮೇಗೌಡ.—ಇನ್ನೂ ಈ ಯೋಜನೆ ಯಾವಾಗ ಪ್ರಾರಂಭವಾಗುತ್ತದೆ ?

ಶ್ರೀ ಎಂ. ವೈ. ಘೋರ್ಪಡೆ.—ಇದು ಇಂಡೋ-ಜರ್ಮನ್ ಪ್ರಾಜೆಕ್ಟ್. ಇದು ಇನ್ನೂ ಪ್ರಾರಂಭವಾಗಿಲ್ಲ. ಇದಕ್ಕೆ ಕೇಂದ್ರಸರ್ಕಾರದ ಮಂಜೂರಾತಿ ಇನ್ನೂ ಪಡೆದಿಲ್ಲ. ಈ ಕಾರ್ಯಕ್ರಮದ ಪ್ರಕಾರ ಮೂರು ಜಿಲ್ಲೆಗಳಲ್ಲಿ ಇದನ್ನು ಲಾಗು ಮಾಡಬೇಕು ಎಂದು ಉದ್ದೇಶ ಇದೆ. ಇದು ಜಾರಿಯಲ್ಲಿ ಬಂದರೆ ೨೭ ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಇದರಲ್ಲಿ ಹತ್ತು ಪರ್‌ಸೆಂಟ್ ಅಂದರೆ ೨.೭ ಕೋಟಿ ರೂಪಾಯಿ ಮಾತ್ರ ನಮ್ಮ ಸರ್ಕಾರದ್ದು. ಪ್ರೋಗ್ರಾಂ ಈ ರೀತಿ ಇದೆ ಈ ಪೈಪ್ ವಾಟರ್ ಸಪ್ಲೈ ಸ್ಕೀಮ್ ೯೦-೯೦: ೯೦ ಮಿನಿ ವಾಟರ್ ಸಪ್ಲೈ ಸ್ಕೀಮ್, ಪೈಪ್‌ವಾಟರ್ ಸಪ್ಲೈ ಆಗ್ ಮೆಂಟೇಷನ್, ಅದು ಒಂದು ೮೭ ಮತ್ತೆ ೬೫ ಆಗ್‌ಮೆಂಟೇಷನ್ ಫಾರ್ ಮಿನಿ ವಾಟರ್ ಸಪ್ಲೈ ಸ್ಕೀಮ್. ಈ ಪ್ರಪೋಸಲ್ ಮಾರ್ಚ್ ೮೯ರಲ್ಲಿ ಬಂತು. ಫೆಬ್ರವರಿ ೮೯ರಲ್ಲಿ ಬಿಡಬೇಕೆಂದು ಚರ್ಚೆ ನಡೆಯಿತು. ಎರಡು ಜಿಲ್ಲೆಗಳಲ್ಲಿ ಇದನ್ನು ದಕ್ಷಿಣ ಕನ್ನಡ ಜಿಲ್ಲೆ ಇದರಲ್ಲಿ ಬಿಟ್ಟು ಬಿಟ್ಟು ವರ್ಲ್ಡ್ ಬ್ಯಾಂಕ್‌ಪ್ರಾಜೆಕ್ಟ್‌ನಲ್ಲಿ ಸೇರಿಸಬೇಕೆಂದು ಹೀಗಾಗಿ ಒಂದು ವರ್ಷ ಆಯಿತು ವಿಳಂಬವಾಗಿದೆ. ೨೬-೩-೮೯ಕ್ಕೆ ಈ ಪ್ರಪೋಸಲ್ ಪುನಃ ನಾವು ಪ್ಲಾನಿಂಗ್ ಡಿಪಾರ್ಟ್‌ಮೆಂಟಿಗೆ ಕಳುಹಿಸಿದ್ದೇವೆ. ಮತ್ತೆ ಈ ಸ್ಟೇಟ್ ಕೋಆರ್ಡಿನೇಷನ್ ಕಮಿಟಿ, ಚೀಫ್ ಸೆಕ್ರೆಟರಿ ಇವರಲ್ಲಿ ಕ್ಲಿಯರ್ ಆದನಂತರ ಕ್ಯಾಬಿನೆಟ್ ಮುಂದೆ ಬರುತ್ತದೆ. ಇದನ್ನು ಕಾರ್ಯಗತ ಮಾಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ.—ಈ ಯೋಜನೆಯಲ್ಲಿ ಖರ್ಚುಮಾಡಲಿಕ್ಕೆ ಯೋಚನೆ ಮಾಡಿರುವ ೨೭ ಕೋಟಿ ೭ ಲಕ್ಷ ರೂಪಾಯಿನಲ್ಲಿ ಜರ್ಮನಿ ಸರ್ಕಾರ ಎಷ್ಟು ಹಣವನ್ನು ಕೊಡುತ್ತದೆ. ಅದೆಲ್ಲ, ಪೂರ್ತಿ ಗ್ರಾಂಟೇ ಅಥವಾ ಸಾಲವೇ ? ರಾಜ್ಯ ಸರ್ಕಾರ ೨.೭೦ ಲಕ್ಷ ರೂಪಾಯಿ ದುಡ್ಡು ಹಾಕೆ ಬೇಕಾಗುತ್ತದೆಂದು ಹೇಳಿದಿರಿ. ಕೇಂದ್ರ ಸರ್ಕಾರದವರು ಎಷ್ಟು ಹಣವನ್ನು ಕೊಡುತ್ತಾರೆ. ಅವರು ಸಾಲದ ರೂಪದಲ್ಲಿ ಕೊಡುತ್ತಾರೋ ಅಥವಾ ಗ್ರಾಂಟ್ ರೂಪದಲ್ಲಿ ಕೊಡುತ್ತಾರೋ ತಿಳಿಸಿ ?

ಶ್ರೀ ಎಂ. ವೈ. ಘೋರ್ಪಡೆ.—ನಾನು ಆಗಲೇ ಹೇಳಿದ ಪ್ರಕಾರ ನಮಗೆ ಇರತಕ್ಕ ಮಾಹಿತಿ ೨೭.೭ ಕೋಟಿ ರೂಪಾಯಿ ಇದರಲ್ಲಿ ೨.೭ ಕೋಟಿ ರೂಪಾಯಿ ಮಾತ್ರ ನಮ್ಮದು. ಬಾಕಿಯದೆಲ್ಲಾ ಜರ್ಮನಿಯಿಂದ ಬರುವಂಥದ್ದು. ಮತ್ತೆ ನಮ್ಮ ಕೇಂದ್ರ ಸರ್ಕಾರದಿಂದ ಕೂಡ ಅವರ ನಿಯಮಗಳ ಪ್ರಕಾರ ಹಣ ಬರುತ್ತದೆ. ಮತ್ತೆ ಅಲ್ಲಿಂದ ನಮಗೆ ಬರುತ್ತದೆ. ಅದರಲ್ಲಿ ಇನ್ನು ಹೆಚ್ಚಿಗೆ ರೀಟೈಲ್ಸ್ ಇಲ್ಲ. ಅದರ ಅವಶ್ಯಕತೆ ಕೂಡ ಇಲ್ಲ. ಏಕೆಂದರೆ, ಇನ್ನೂ ನಾವು ಈ ಪ್ರಾಜೆಕ್ಟ್ ಅಲ್ಲಿ ಕಳುಹಿಸಿಲ್ಲವಾ ನಾವು ಕ್ಯಾಬಿನೆಟ್‌ನಲ್ಲಿ ಪಾಸ್ ಮಾಡಿ ಕಳುಹಿಸಿದಾಗ ಮಾತ್ರ ಕಾರ್ಯಗತ ಮಾಡಲಿಕ್ಕೆ ಸಾಧ್ಯ.

ಗುಲ್ಬರ್ಗಾ ಜಿಲ್ಲಾ ಪರಿಷತ್ತಿನಲ್ಲಿ ಅವ್ಯವಹಾರಗಳು

೪೬೩. ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ (ಸೇಡಂ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ೧೯೮೮-೮೯ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಯ ಬರಪೀಡಿತ ಪ್ರದೇಶದ ಸಣ್ಣ ರೈತರಿಗೆ ಬೀಜ, ರಾಸಾಯನಿಕ ಗೊಬ್ಬರವನ್ನು ಉಚಿತವಾಗಿ ವಿತರಣೆ ಮಾಡಲು ಗುಲ್ಬರ್ಗಾ ಜಿಲ್ಲಾ ಪರಿಷತ್‌ಗೆ ಬಿಡುಗಡೆಯಾದ ಒಂದು ಕೋಟಿ ರೂಪಾಯಿಗಳ ಅವ್ಯವಹಾರದ ಬಗ್ಗೆ ಸಿ.ಒ.ಡಿ. ತನಿಖೆ ನಡೆದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸಿ. ಒ. ಡಿ. ವರದಿ ಬಂದಿದೆಯೇ ?

ಇ) ಈ ಅವ್ಯವಹಾರದಲ್ಲಿ ನೇರವಾಗಿ ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯ ದರ್ಶಿಗಳು ಸರ್ಕಾರದ ಆದೇಶವನ್ನು ಉಲ್ಲಂಘಿಸಿ ನಿರ್ಣಯ ಕೈಗೊಂಡಿದ್ದು ನಿಜವೇ ?

ಈ) ಹಾಗಿದ್ದಲ್ಲಿ ಇದು ಕಾನೂನು ಬಾಹಿರವಲ್ಲವೇ ?

ಉ) ಕಾನೂನು ಬಾಹಿರವಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮಗಳೇನು ?